ಅ) ಪ್ರೌಢಶಿಕ್ಷಕರ ಖಾಲಿ ಹುದ್ದೆಗಳು – 1405
ಶಿಕ್ಷಕರೇತರ ಖಾಲಿ ಹುದ್ದೆಗಳು – 151

ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನಂತರ ಒದಗಿಸಲಾಗುವುದು.

ಆ) 1405 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಲ್ಲಿ ದರ್ಜಿ ಮತ್ತು ನೇಮಕಾತಿ ನಿಯಮದಂತೆ 225 ಹುದ್ದೆಗಳನ್ನು ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿ ತುಂಬಲು ವಿಭಾಗೀಯ ಸಹ ನಿರ್ದೇಶಕರ ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ 1180 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದೊಳಗಾಗಿ ಭರ್ತಿ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು ಶಿಕ್ಷಕರೇತರ ಹುದ್ದೆಗಳ ಬಗ್ಗೆ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಇವುಗಳಿಗೆ ನೇರ ನೇಮಕಾತಿಗೆ ಅವಕಾಶವಿಲ್ಲ. ಅನುಕಂಪದ ಆಧಾರದ ಮೇಲೆ ಹಾಗೂ ಬಡ್ತಿ ನೀಡಿ ತುಂಬಬಹುದಾದ ಹುದ್ದೆಗಳನ್ನು ಆದಷ್ಟು ಶೀಘ್ರ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮಂಜೂರಾಗಿರುವ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು 466
ಖಾಲಿ ಇರುವ ಹುದ್ದೆಗಳು – 16
ಮಂಜೂರಾಗಿರುವ ಪ್ರೌಢಶಾಲಾ ಶಿಕ್ಷಕರೇತರ ಹುದ್ದೆಗಳು – 95
ಖಾಲಿ ಇರುವ ಹುದ್ದೆಗಳು 05

ಶಿಕ್ಷಕರ ಖಾಲಿ ಹುದ್ದೆಗಳನ್ನು ಬಡ್ತಿ ಹಾಗೂ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಿಕ್ಷಕರೇತರ ಹುದ್ದೆಗಳನ್ನು ಬಡ್ತಿ ಹಾಗೂ ಅನುಕಂಪದ ಆಧಾರದ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಈ) ನಿಜ.

ಉ) ಸಿಬ್ಬಂದಿ ಮಂಜೂರಾತಿಗಾಗಿ ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ನಂತರ ಭರ್ತಿ ಮಾಡಲಾಗುವುದು.

ರಾಜ್ಯದಲ್ಲಿರುವ ಬಿಇಡಿ ಕಾಲೇಜುಗಳ ಸಂಖ್ಯೆ

317 (857) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ಬಿ.ಎಡ್ ಕಾಲೇಜುಗಳ ಹಾಗೂ ಸರ್ಕಾರಿ ಬಿಎಡ್ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಆ ಪೈಕಿ ಅನುದಾನವನ್ನು ಕೊಡಲಾಗುತ್ತಿರುವ ಖಾಸಗಿ ಬಿಎಡ್ ಕಾಲೇಜುಗಳೆಷ್ಟು; ಹಾಗೂ ಅನುದಾನವನ್ನು ನೀಡುವಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳೇನು;

ಇ) ರಾಜ್ಯದಲ್ಲಿ ಹೊಸದಾಗಿ ಬಿಎಡ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವ ಬಗ್ಗೆ ಸರ್ಕಾರದ ಧೋರಣೆ ಏನು;

ಈ) 7 ವರ್ಷಗಳು ಮುಗಿದ ಖಾಸಗಿ ಬಿಎಡ್ ಕಾಲೇಜುಗಳಿಗೆ ಅನುದಾನ ಕೊಡಲಾಗುವುದೇ;

ಹಾಗಿಲ್ಲದಿದ್ದಲ್ಲಿ ಅನುದಾನವನ್ನು ಕೊಡಲಾಗುವುದು ಯಾವಾಗ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):-

ಅ) ಖಾಸಗಿ 56
ಸರ್ಕಾರಿ 6

ಆ) 14 ಕಾಲೇಜುಗಳು
1966ರ ಕರ್ನಾಟಕ ಪ್ರೌಢ ಶಿಕ್ಷಕರ ಶಿಕ್ಷಣ ಕಾಲೇಜುಗಳ ಹೊಸ ಅನುದಾನ ಸಂಹಿತೆ.

ಇ) ಎಂಟನೇ ಪಂಚವಾರ್ಷಿಕ ಯೋಜನಾ ಅವಧಿಯ ಅಂತ್ಯದವರೆಗೆ ಸರ್ಕಾರಿ ಅಥವಾ ಖಾಸಗಿ ರಂಗದಲ್ಲಿ ಹೊಸ ಬಿಎಡ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡದಿರುವುದು.

ಈ) ಇಲ್ಲ.

ದಿನಾಂಕ 16-6-83ರಿಂದ ಯಾವುದೇ ಬಿಎಡ್ ಕಾಲೇಜಿಗೆ ಅನುದಾನ ನೀಡಬಾರದೆಂದು ಸರ್ಕಾರ ನಿರ್ಧರಿಸಿದೆ.

ದೊಡ್ಡವಾಡ ಮತ್ತು ಇಂಚಲಿ ಹಾಗೂ ಚಚಡಿ ಗ್ರಾಮಗಳಲ್ಲಿ ವೃತ್ತಿ ಶಿಕ್ಷಣ ಕೇಂದ್ರ

318 (853) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ನಡೆಸಲಾಗುತ್ತಿರುವ ವೃತ್ತಿ ಶಿಕ್ಷಣ ಕೇಂದ್ರಗಳೆಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹಾಗೂ ನಡೆಸುತ್ತಿರುವ ವೃತ್ತಿ ಶಿಕ್ಷಣ ಸಂಸ್ಥೆಗಳ ಹೆಸರನ್ನು ವಿವರ ನೀಡುವುದು).

ಆ) ಕೇವಲ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಹೆಚ್ಚಿಗೆ ವೃತ್ತಿ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗುತ್ತಿದ್ದು, ಅದನ್ನು ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಇ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ ಇಂಚಲ ಹಾಗೂ ಚಚಡಿ, ಬೈಲಹೊಂಗಲ ತಾಲ್ಲೂಕು ಪೈಕಿ ನೇಸರಗಿ, ದೊಡ್ಡವಾದ ಗ್ರಾಮಾಂತರ ಪ್ರದೇಶದಲ್ಲಿ ವೃತ್ತಿ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಸಚಿವರು):-

ಅ) 471

ಪಟ್ಟಿ ಲಗತ್ತಿಸಿದೆ.

ಆ) ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶವೆಂಬ ಭೇದಭಾವವಿಲ್ಲದೆ ಆಯಾ ಪ್ರದೇಶದ ಅವಶ್ಯಕತೆ ಹಾಗೂ ಬೇಡಿಕೆಗೆ ಅನುಸಾರವಾಗಿ ಕೋರ್ಸುಗಳನ್ನು ತೆರೆಯಲಾಗುವುದು.

ಇ) ಬೇಡಿಕೆ ಹಾಗೂ ಅವಶ್ಯಕತೆಯ ಆಧಾರದ ಮೇಲೆ ಕೋರ್ಸು ನಡೆಸಲು ನಿರ್ದಿಷ್ಟಪಡಿಸಿದ ಸೌಕರ್ಯಗಳನ್ನು ಗಣನೆಗೆ ತೆಗೆದುಕೊಂಡು ವೃತ್ತಿ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.